ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ॥ 9, ಸನ 1903.

IIನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜ್‌ರು ಮಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್ನಾಮೆ.

ನೋಟಿಫಿಕೇಷನ್, ತಾರೀಖು 6ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟು ಚನ್ನಪಟ್ಟಣದ ತಾಲ್ಲೂಕು ಕೋಲಾರ ಪೇಟೆ ಸಬ್ ತಾಲ್ಲೂಕು ಕೋಲಾರಪೇಟೆ ಫಾರೆಸ್ಟು ರೇಂಜಿಗೆ ಸೇರಿದ ಮಾಕಳೀ ಮತ್ತು ತೆಂಗಿನಕಲ್ ಸ್ಟೇಟ್ ಫಾರೆಸ್ಟುಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿನ ಫಾರೆಸ್ಟು ಬೆಳೆ ಅಂದರೆ, ಸೌದೆಯನ್ನು ಈ ಕೆಳಗಿನ ಷರತ್ತುಗಳಿಗೆ ವಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯನ್ನು ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರ್ ಸಾಹೇಬರವರು ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದ ಸನ 1903ನೇ ಇಸವಿ ಜುಲೈ ಮಾಹೆ ತಾರೀಖು 18ರಲ್ಲು ಚನ್ನಪಟ್ಟಣದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು :—

ಫಾರೆಸ್ಟಿನ ಮತ್ತು ಕೂಪಿನ ಹೆಸರು.	ಕೆಲಸಮಾಡುವ ಸರ್ಕಲ್ ನಂಬರ್.	ಕೂಪು ನಂಬರ್.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಎಕರೆ ಬಂದಕ್ಕೆ ಸಿಕ್ಕತಕ್ಕ ವೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.
ಮಾಕಳೀ ಫಾರೆಸ್ಟು ನಾಗವಾರದ ಕೂಪು	I	I	130	ಜುಜ್ಜಲು, ಹುಲುವೆ, ಈಜಿ, ಪಚಾರಿ, ಗೇದರಿ, ಕಗ್ಗಲಿ, ದೇವದಾರು, ಚನ್ನಂಗಿ, ಗೊರವಿ, ನೌಲಾಡಿ, ದಿಂಡಗವಗೈರೆ	ಎಕರೆ ಬಂದಕ್ಕೆ ಸುಮಾರು ಅರ್ಧ ಟನ್	ಚನ್ನಪಟ್ಟಣದ ರೈಲ್ವೆ ಸ್ಟೇಷನ್‌ಗೆ 6 ಮೈಲಿ
ಡಿಟೋ	II	I	90	ಡಿಟೋ	2½ ಟನ್	ಡಿಟೋ
ಮಾಕಳೀ ಫಾರೆಸ್ಟು ಕ್ಯಾಸಾಪುರದ ಕೂಪು	III	I	120	ಡಿಟೋ	3 ಟನ್	ಕೋಲಾರಪೇಟೆ ರೈಲ್ವೆ ಸ್ಟೇಷನ್‌ಗೆ 8 ಮೈಲಿ
ಮಾಕಳೀ ಫಾರೆಸ್ಟು ಅನಮಾನಹಳ್ಳಿ ಕೂಪು	IV	I	200	ಡಿಟೋ	2 ಟನ್	ಡಿಟೋ
ತೆಂಗಿನಕಲ್ ಫಾರೆಸ್ಟು ದ್ಯಾವಪುರದ ಕೂಪು	II	I	100	ನಾಯಿಬ್ಯಾಲಾ, ಜುಜ್ಜಲು, ಹುಲುವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಚನ್ನಂಗಿ ವಗೈರೆ	2½ ಟನ್	ಚನ್ನಪಟ್ಟಣದ ರೈಲ್ವೆ ಸ್ಟೇಷನ್‌ಗೆ 9 ಮೈಲಿ
ತೆಂಗಿನಕಲ್ ಫಾರೆಸ್ಟು ಮಲ್ಲಂಗೆರೆ ಕೂಪು	III	I	200	ಡಿಟೋ	ಡಿಟೋ	ಡಿಟೋ ಸ್ಟೇಷನ್‌ಗೆ 6 ಮೈಲಿ

2. ಈ ಹರಾಜು ಪ್ರತ್ಯೇಕ ಪ್ರತ್ಯೇಕ ಕೂಪುವಾರುಗಿಯೂ, ಇಲ್ಲವೆ ಒಟ್ಟುಗಿಯೂ, ಅಥವಾ ಎಕರೆ 1ಕ್ಕೆ ಯಾ ಟ್ರ 1ಕ್ಕೆ ಇಷ್ಟೆಂದು ನಿರ್ಧರಿಸಿ ಹರಾಜು ಮಾಡತಕ್ಕದ್ದು. ಹರಾಜು ಕ್ರಮ ನಡಿಸತಕ್ಕ ಆಫಿಸರ ಅನುಮತೀಗೆ ಬಳಪಟ್ಟು ಇರುತ್ತೆ. ಅಲ್ಲವೆ ಈ ಹರಾಜು ಫಾರೆಸ್ಟು ಕರ್ಣರವೇಟರ್ ಸಾಹೇಬರವರ ಮಂಜೂರಾತ್ರಿಗೆ ಬಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸತಕ್ಕ ಡಿಪ್ಯುಟಿ ಕಮಿಷರ್ಸ ಸಾಹೇಬರವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಆಫಿಸರಿಗೆ ಅಧಿಕಾರವಿರುತ್ತೆ. ಮತ್ತು ಹರಾಜಾಗದೆ ಉಳಕೊಳ್ಳುವ ಕೂಪುಗಳನ್ನು ಅವರಿಗೆ ಕಾಣಬರುವ ರೀತಿಯಲ್ಲಿ ವ್ಯವಸ್ಥೆಹೊಂದಿಸುವ ಅಧಿಕಾರವು ಅವರ ದಾಗಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ " 25—0—0 " ಇಪ್ಪತ್ತೈದು ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕು. ಈ ವೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು.

5. ಮಂಜೂರಾದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಸವಾಲ್ ಮಂಜೂರಾದ ತಾರೀಖು ಲಾಗಾಯತು ಒಂದು ವಾರ ದೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪೀ ಯಾ ಕಂಪಾರ್ಟ್‌ಮೆಂಟನ್ನು ದುಸರಾ ಹರಾಜು ಮಾಡಿಸಲಾದೀತು. ಲುಕ್ಸಾನಿಗೆ ವೊದಲಿನ ಹರಾಜುದಾರನು ಗುರಿಯಾಗಿರಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ ಮತ್ತು ವೊದಲನೇ ಹರಾಜಿನಲ್ಲಿ ಡಿಪಾಜಿಟ್ಟಾಗಿ ಠೇವಣೀ ಇರಿಸಿದ ವೊಬಲಗು ಜುಲ್ಮಾನೆ ತರೀಖು ಸರ್ಕಾರಕ್ಕೆ ದಂಡವಾಗಿ ಕೇರಿಸಲ್ಪಡುತ್ತೆ.

1. ಸೌದೆ ಮತ್ತು ಚಾಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನು ಸ್ಯ 1904ನೇ ಜೂ ಮಾಹೇ ಆಖೈರಿನೊಳಗಾಗಿ ಪೂರೈಸತಕ್ಕದ್ದು, ತಪ್ಪಿದಲ್ಲಿ ಈ ವೊದಲೆ ಪಾವತಿಯಾಗಿರತಕ್ಕ ವೊಬಲಗು ದಂಡವಾಗಿ ಸರ್ಕಾರಕ್ಕೆ ಕೇರಿಸಲ್ಪಡುತ್ತೆ.

2. ಫಾರೆಸ್ಟ್ ಇಲಾಖಾ ಮಾರೀಫತ್ತು ಗುರ್ತು ಅಥವ ನಿರ್ಖಾ ಮಾಡಿರತಕ್ಕ ಮರಗಳೂ, ಮತ್ತು ಮೂರು ಅಂಗುಲ ಸುತ್ತಳತೆ ವೊಳಗಿರುವ ಸೊಸಿಗಳನ್ನು ಅಥವಾ ಗಿಡಗಳನ್ನು ವಿನಃ ಇತರ ಎಲ್ಲಾ ಮರ, ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಬಂದು ಕೊನೆಯಿಂದ ಇನ್ನೊಂದು ಕೊನೆಯ ವರಿವಿಗೆ ಸದರೀ ಕಡಿಯತಕ್ಕ ಕೂಪು ಪೂರೈಸುವ ವರಿವಿಗೂ ಕಡಿಯತಕ್ಕದ್ದು. ಈ ಹರಾಜಿನಲ್ಲಿ ತಂಗಡಿ, ಕಕ್ಕೆ, ಫಲಗಳು ಬಿಡುವ ಅಂದರೆ, ಬ್ಯಾಲ, ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಶೀ, ಅಳಲೆ, ವಗೈರೆಯೂ, ಹುಲ್ಲು ಸಹಾ ಕೇರಿರುವದಿಲ್ಲಾ. ಷರತ್ತುಗಳಿಗೆ ವೆತಿರಿಕ್ತವಾಗಿ ಮನಸೋಯಿಚ್ಛೆಯಾಗಿ ಮರಗಳನ್ನು, ಗಿಡಗಳನ್ನು ಕಡಿಯುವದು ಮತ್ತು ಇತರ ಯಾವ ತರವಾದ ಖರಾಬ್ ಕೆಲಸ ಅಂದರೆ, ನೆಲವಟ್ಟದ ಮೇಲೆ ಮೂರು ಅಂಗುಲ ವುದ್ದಕ್ಕಿಂತ ಕಡದು ವೋಟುಗಳು ಇಜ್ಜದು ವಗೈರೇ ಕಂಡುಬಂದಲ್ಲಿ ಅಂಥಾವೆಲ್ಲಾ ಖರಾಬ್ ಕೆಲಸ ದುರಸ್ತು ಪೂರೈಸುವ ವರಿವಿಗೂ ಕೂಪು ಯಾ ಕೂಪುಗಳಲ್ಲಿ ಸೌದೆ ಯಾ ಚಾಬೀನೆ ಕತ್ತಾಯಿಸಿ ಸಾಗಿಸುವದನ್ನು ನಿಲ್ಲಿಸಲ್ಪಡುತ್ತೆ.

3. ಕೂಪು ಯಾ ಕೂಪುಗಳಲ್ಲಿ ಬಾಬು ರೂಢಿಸಿ ರಪ್ತು ಮಾಡಿಕೊಳ್ಳಲು ಸ್ಥಳದಲ್ಲಿ ಫಾರೆಸ್ಟ್ ಇಲಾಖಾದಿಂದ ವೊಕರೂರ್ ಮಾಡಲ್ಪಟ್ಟ ನೌಕರರಿಂದ ರಹದಾರಿಗಳು ಕೊಡಲ್ಪಡುತ್ತೆ. ಈ ರಹದಾರಿಗಳನ್ನು ರಪ್ತಾಗುತ್ತಿರುವ ಮಾಲು ಸಹಿತ ಹಾಜರು ಇರತಕ್ಕದ್ದಲ್ಲದೆ ಕ್ಲೋಸುಬ್ಯಾಟೆ, ಚನ್ನಪಟ್ಟಣ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕ ಮಾಡಲ್ಪಟ್ಟ ಯಾವ ಸ್ಥಳ, ಸ್ಟೇಷನ್‌ಗಳ ಬಳಿ ಅಜಮಾಯಿಷೀ ಬಗ್ಗೆ ಹಾಜರ್ಮಾಡಬೇಕು.

4. ಕೂಪು ಯಾ ಕೂಪುಗಳಿಂದ ಸೌದೆ ಮತ್ತು ಚಾಬೀನೇಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆಯೂ, ಅಥವಾ ಸೂರ್ಯಾಸ್ತಮಯವಾದಮೇಲೆಯೂ ಸಾಗಿಸಕೂಡದು.

5. ಇಜಾರೆದಾರನಿಗೆ ಕತ್ತಾವಣಿ ಕೆಲಸಕ್ಕೆ ಕೊಟ್ಟು ಇರುವ ಕೂಪು ಯಾ ಕೂಪುಗಳೊಳಗೆಯಾಗಲೀ ಅಥವಾ ಭಂಡಿ ಮಾರ್ಗದಲ್ಲಿಯಾಗಲೀ ಬೆಂಕೀ ಬಿದ್ದು ಅಂಥಾ ಕೃತ್ಯ ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದದ್ದೆಂದು ಫಾರೆಸ್ಟು ಇಲಾಖಾ ಆಫಿಸರುಗಳಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ದಾರನಾಗಬೇಕು.

6. ಕಂಟ್ರಾಕ್ಟುದಾರನಿಗೂ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರಿಗೂ ಈ ಸಂದರ್ಭಗಳಲ್ಲಿ ಉಂಟಾಗಬಹುದಾದ ನಿಬಂಧನೆಗಳಿಗೂ ಅಂಥಾ ನಿಬಂಧನೆಗಳಿಗೆ ವಿರೋಧವಾಗಿ ನಡದ ಕೃತ್ಯಗಳ ವಿಷಯವಾಗಿಯೂ ಮತ್ತು ಯಾವ ತರವಾದ ಎಲ್ಲಾ ಹೆಚ್ಚು ಕುಂದುಗಳ ಮೇಲೆ ಫಾರೆಸ್ಟು ಕರ್ಣರವೇಟರ್ ಸಾಹೇಬರವರ ಆರ್ಡರ್ ಆಖೈರ್ ಆಗಿರುತ್ತೆ.

7. ಕಂಟ್ರಾಕ್ಟುದಾರನು ಬರದುಕೊಡತಕ್ಕ ಮುಚ್ಚಳಿಕೆಯು ಹರಾಜು ಕಾಲದಲ್ಲಿ ತಿಳುವಳಿಕೆ ಬಗ್ಗೆ ಓದಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್ಸ್.

ನೋಟೀಸು ತಾರೀಖು 13ನೇ ಜೂ್ 1903ನೇ ಇಸವಿ.

ಮೈಸೂರು ಗೆಜೆಟ್ II‌ನೇ ಭಾಗ 588ನೇ ಪುಟದಲ್ಲಿ ಇರುವ 26—4—03ನೇ ಮಾರ್ಕಂ ನೋಟಿಫಿಕೇರ್ಷ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳ ಸರ್ಕಾರಿ ಬಂಜರು ಜಮೀನುಗಳಲ್ಲಿರುವ (ಸ್ಟೇಟ್ ಫಾರೆಸ್ಟ್ಸ್ ಮತ್ತು ಪ್ಲಾಂಟೇರ್ಷನ್ಸ್) ಆವರಿಕೆ ಮತ್ತು ಕಕ್ಕೆಚಕ್ಕೆ ಜಮಾಯಿಸುವ ಹಕ್ಕನ್ನು ಎರಡು ವರುಷಗಳಿಗೆ ಅಂದರೆ 1903ನೇ ಆಗಸ್ಟ್ 1ರ ಲಾಗಾಯಿತು 1905ನೇ ಜೂ್ 30ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜುಲೈ 21ನೇ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಲ್ಪಡುತ್ತೆ.

(1) ಹೆಗ್ಗಡದೇವನಕೋಟೆ	(4) ಹುಣಸೂರು
(2) ಗುಂಡ್ಲುಪೇಟೆ	(5) ಯಡತೊರೆ
(3) ನಂಜನಗೂಡು	(6) ಚಾಮರಾಜನಗರ

ಷರತ್ತು:—ಮೇಲೆ ನಮೂದಿಸಿರುವ 26 – 4—03ನೇ ಮಾ॥ ನೋಟಿಫಿಕೇರ್ಷ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

1903ನೇ ಇಸವಿ ಜುಲೈ ತಾರೀಖು 4ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಲಕ್ಕವಳ್ಳಿ ಫಾರೆಸ್ಟ್ ಬಡಾವಣೆ (ಹೊಸಹಳ್ಳಿ ಬ್ಲಾಕು).

ಸ್ರ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇರ್ಷ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸ್ರ್ 1903ನೇ ಇಸವಿ ಏಪ್ರೆಲ್ ಮಾಹೆ 30ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ, ಈ ಇಸ್ತಿಹಾರು ಫಾಯಿಷಾದ ಲಾಗಾಯಿತು ಮೈಸೂರ ಫಾರಸ್ಟ್ ರೆಗ್ಯುಲೇರ್ಷ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಆಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1903ನೇ ಇಸವಿ ಏಪ್ರೆಲ್ ಮಾಹೆ 30ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟ್ಯ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದೃಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ತತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂ .

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲ ೪ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟಿ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ತತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ತಿಳಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತಾವೇಜು ವಗೈರೆಗಳನ್ನು ಸಹ ಹಾಜರ್ಪಡಿಸತಕ್ಕದ್ದು.

ಫಾರೆಸ್ಟ್ ರೆಗ್ಯುಲೇರ್ಷ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೋ ಅಂಥ ತಮಾಂ ಹಕ್ಕುಗಳು ರದ್ದಾಗುವಲ್ಲದೆ, ಅನಂತರ ಯಾವ ಮನವಿಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ತಿಪ್ಪುಗುಟ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮಗಳು.	ಸುಮಾರು ವಿಸ್ತೀರ್ಣ.	ಬೀಟಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಕಡೂರು.	ತರೀಕೆರೆ.	7 ಚದರ ಮೈಲಿಗಳು, 479 ಎಕರೆಗಳು.	ಲಕ್ಕವಳ್ಳಿ ಫಾರೆಸ್ಟ್ ಬೀಟಾನಲ್ಲಿ.	ಸ್ಥಳ.—ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಮತ್ತು ವಾಯವ್ಯ ದಿಕ್ಕಿನಲ್ಲಿರುವ ಫಾರೆಸ್ಟ್ ಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಹೊಸಹಳ್ಳಿಯ ಸರ್ವೆ ನಂ. 61ರ ವಾಯವ್ಯ ಮೂಲೆಯಿಂದ ಹೊರಟು ಲೈನು ಭದ್ರಾನದಿಯ ಬಲದಡದ ಉದ್ದಕ್ಕೂ ಅದೇ ಸರ್ವೆ ನಂಬರ್ 61ರ ಈಶಾನ್ಯ ಮೂಲೆಯಲ್ಲಿ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಹೊಸಹಳ್ಳಿಯ ಸರ್ವೆ ನಂ. 60ರ ಆಗ್ನೇಯ ಮೂಲೆಯಲ್ಲಿ ತರೀಕೆರೆ–ಯಡಹಳ್ಳಿ ಹೈರೋಡನ್ನು ಮುಟ್ಟುವ ವರೆವಿಗೆ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಅದೇ ಹೈರೋಡಿನ ಉದ್ದಕ್ಕೂ ಹೊಸಹಳ್ಳಿಯ ಸರ್ವೆ ನಂ. 51ರ ನೈರುತ್ಯ ಮೂಲೆಯನ್ನು ಸದರೀ ಹೈರೋಡು ಮುಟ್ಟುವ ಸ್ಥಳದ ವರೆವಿಗೆ ಹೋಗುತ್ತದೆ. ಆಮೇಲೆ ಅದೇ ಹೈರೋಡು ತಡಸದ ಸರ್ವೆ ನಂ. 8ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಎಲ್ಲೆಯು ದಕ್ಷಿಣ ದಿಕ್ಕಿಗೆ ತಿರಿಗಿಕೊಳ್ಳುವ ಸ್ಥಳದ ವರೆವಿಗೆ ಹೋಗುತ್ತದೆ. ತರುವಾಯ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮೇಲ್ಕಂಡ ಸ್ಟೇಟ್ ಫಾರೆಸ್ಟು ಮತ್ತು ನಂದಿಗಾವೆ ಗ್ರಾಮದ ಸರ್ವೆ ನಂ. 53, 52 ಮತ್ತು 41 ಇವುಗಳ ಎಲ್ಲೆ ಬಾಂದುಗಳು ಮುಟ್ಟುವ ಸ್ಥಳದ ವರೆವಿಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ನಂದಿಗಾವೆಯ ಸರ್ವೆ ನಂ. 52ರ ಉತ್ತರ ಪಾರ್ಶ್ವದ ಉದ್ದಕ್ಕೂ ತಡಸದಿಂದ ದೊಡ್ಡಕ್ಕಾರ್ ಎಸ್ಟೇಟಿಗೆ ಹೋಗುವ ಭಂಡಿ ಜಾಡನ್ನು ಮುಟ್ಟುವ ವರೆವಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ದೊಡ್ಡಕ್ಕಾರ್–ತಡಸ ಭಂಡಿ ಜಾಡಿನ ಉದ್ದಕ್ಕೂ ನಂದಿಗಾವೆಯ ಸರ್ವೆ ನಂ. 41, 30 ಮತ್ತು 29 ಇವುಗಳ ಮಧ್ಯೆ ವರುಮುರಿ ಹಳ್ಳವನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 29ರ ಮಧ್ಯೆ ತಡಸದ ಸರ್ವೆ ನಂ. 92ರ ಆಗ್ನೇಯ ಮೂಲೆಗೆ ಮತ್ತು ನಂದಿಗಾವೆಯ ಸರ್ವೆ ನಂ. 30 ಮತ್ತು 29 ಇವುಗಳ ಮಧ್ಯೆ ಹೋಗುತ್ತದೆ. ಆಮೇಲೆ ತಡಸದ ಸರ್ವೆ ನಂ. 91, 74 ಮತ್ತು 61 ಇವುಗಳ ಮಧ್ಯೆ ತರೀಕೆರೆ–ಯಡಹಳ್ಳಿ ಹೈರೋಡುನಿಂದ ದೊಡ್ಡಕ್ಕಾರ್ ಎಸ್ಟೇಟಿಗೆ ಅಡ್ಡರಸ್ತೆ ಹೋಗುವ ಸ್ಥಳದ ವರೆವಿಗೆ ಹೋಗುತ್ತದೆ. ತರುವಾಯ ತಡಸದ ಸರ್ವೆ ನಂ. 8 ಮತ್ತು 50 ಮತ್ತು ಹೊಸಹಳ್ಳಿಯ ಸರ್ವೆ ನಂ. 27, 50, 52, 59, 58 ಮತ್ತು 61 ಇವುಗಳ ಮಧ್ಯೆ ಭದ್ರಾನದಿಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆನೆಮೇಲೆ ಭದ್ರಾನದಿಯ ಉದ್ದಕ್ಕೂ ಹೊರಟು ಸ್ಥಳಕ್ಕೆ ಹೋಗುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರು, ಕಡೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಆಗಸ್ಟ್ ತಾರೀಖು 1ರಿಂದ ಲಾಗಾಯತು 1904ನೇ ಅಸವಿ ಜೂ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು